ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಸಚಿವರು)(ಗ್ರಾಮೀಣಾಭಿವೃದ್ಧಿ ಸಚಿವರ ಪರವಾಗಿ):- ಅಧ್ಯಕ್ಷರೇ, ಹಿರೇಕೆರೂರು ತಾಲ್ಲೂಕು, ಅಣಜಿ ಗ್ರಾಮದಲ್ಲಿ ತೀವ್ರ ಗಾಳಿ ಹಾಗೂ ಮಳೆ ತೊಂದರೆಯಿಂದ ವಿದ್ಯುತ್ ಪೂರೈಕೆಯಲ್ಲಿ ಅಡಚಣೆಯಾಗಿತ್ತು. ಈಗ ಸಮರ್ಪಕ ವಿದ್ಯುತ್ ಪೂರೈಕೆ ಇರುತ್ತದೆ.

ಅಣಜಿ ಗ್ರಾಮದ ಜನಸಂಖ್ಯೆಯು 1991ರ ಜನಗಣತಿ ಪ್ರಕಾರ 2215 ಇದ್ದು ಕೇಂದ್ರ ವಲಯದಡಿ ನಳನೀರು (ನಲ್ಲಿ) ಸರಬರಾಜು ಯೋಜನೆ ಮುಖಾಂತರ ಕುಡಿಯುವ ನೀರನ್ನು ಪೂರೈಸಲಾಗುತ್ತಿದೆ. ಪ್ರಸ್ತುತ ಅಣಜಿ ಗ್ರಾಮದಲ್ಲಿ ಎರಡು ಕೈ ಪಂಪುಗಳು ಕಾರ್ಯ ನಿರ್ವಹಿಸುತ್ತಿವೆ. ಸದರಿ ಗ್ರಾಮದ ಕುಡಿಯುವ ನೀರು ಸರಬರಾಜು ಅಭಿವೃದ್ಧಿ ವ್ಯವಸ್ಥೆಗಾಗಿ ಈಗಾಗಲೇ ಕಿರು ನೀರು ಸರಬರಾಜು ಯೋಜನೆಯನ್ನು ಕೈಗೆತ್ತಿಕೊಂಡಿದ್ದು, ಕಾಮಗಾರಿ ಪೂರ್ಣಗೊಂಡಿದ್ದು ವಿದ್ಯುತ್ ಸಂಪರ್ಕವನ್ನು ನಿರೀಕ್ಷಿಸಲಾಗಿದೆ. 1996-97ನೇ ಸಾಲಿನಲ್ಲಿ ನಳನೀರು ಅಭಿವೃದ್ಧಿ ಯೋಜನೆಯಡಿ ರೂ. 58,000ಗಳ ಅನುದಾನ ಒದಗಿಸಲಾಗಿದ್ದು, ನೀರು ಪೂರೈಕೆ ಯೋಜನೆಯ ಹಳೆಯ ಪೈಪ್ ಲೈನ್‌ಗಳ ದುರಸ್ತಿ ಕಾರ್ಯ ಮಾಡಲಾಗುವುದು. ಈಗಿರುವ ಹಾಲೆ ಎರಡು ಕೈ ಪಂಪು ಕೊಳವೆ ಬಾವಿಗಳ ಜೊತೆಗೆ ಇನ್ನೂ ಎರಡು ಕೊಳವೆಬಾವಿಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತದೆ.

(ಅಧ್ಯಕ್ಷರು ಶ್ರೀ ರಮೇಶ್ ಕುಮಾರ್ ಪೀಠವನ್ನು ಅಲಂಕರಿಸಿದರು)

ತೀರ್ಥ ಹಳ್ಳಿ ತಾಲ್ಲೂಕು ಕರಡಿಗ ಗ್ರಾಮದ ಸರ್ಕಾರಿ ಹಳ್ಳವನ್ನು ಖಾಸಗಿಯವರಿಂದ ಭಗರ್‌ಹುಕ್ಕುಂ ಸಾಗುವಳಿ

ಶ್ರೀ ಆಯನೂರು ಮಂಜುನಾಥ (ಹೊಸ ನಗರ):- ಮಾನ್ಯ ಅಧ್ಯಕ್ಷರೆ, ತೀರ್ಥಹಳ್ಳಿ ತಾಲ್ಲೂಕ್ ಕರಡಿಗ ಗ್ರಾಮದ ಸರ್ವೆ ನಂ. 33 ರಲ್ಲಿಯ ಸರ್ಕಾರಿ ಹಳ್ಳವನ್ನು ಖಾಸಗಿಯವರು ಭಗರ್ ಹುಕ್ಕುಂ ಸಾಗುವಳಿ ಮಾಡಿರುವುದರಿಂದ ಸದರಿ ಗ್ರಾಮದ ಸರ್ವೆ ನಂ. 41 ಮತ್ತು 50ರಲ್ಲಿಯ 4-5 ಎಕರೆ ತರ ಬಾಗಾಯ್ತಿ ಜಮೀನಿನಲ್ಲಿ 2 ರಿಂದ 4 ಅಡಿ ನೀರು ಮಳೆಗಾಲದಲ್ಲಿ ನಿಂತು ಫಸಲು ನಾಶವಾಗುವುದನ್ನು ತಪ್ಪಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?

1995-96ರ ಮಾರ್ಚ್ ತಿಂಗಳಲ್ಲಿ ಶಿವಮೊಗ್ಗ ಜಿಲ್ಲಾ ಪಂಚಾಯ್ತಿಯತಿಯಿಂದ ಸದರಿ ಕಾಮಗಾರಿಕೆ ಬಗ್ಗೆ ಈಗಾಗಲೇ 17000 ರೂಪಾಯಿಗಳನ್ನು ಬಿಡುಗಡೆ ಮಾಡಿ ಸರ್ವೆ ನಂ.57 ರ ಮುಖಾಂತರ ಕಾಲುವೆಯಲ್ಲಿ ನೀರು ಹರಿದು ಹೋಗಲು ಪೈಪ್‌ಗಳನ್ನು ಅಳವಡಿಸಲು ಬಿಡುಗಡೆ ಮಾಡಿದ್ದರು ಸಹ ಕಾಮಗಾರಿಯನ್ನು ಪ್ರಾರಂಭಿಸದೆ ಇರಲು ಕಾರಣವೇನು ?

1996ರ ಮಳೆಗಾಲದಲ್ಲಿ ಬೇಸಾಯ ಮೊದಲು ಸದರಿ ರೈತರಿಗೆ ಅನುಕೂಲ ಮಾಡಿಕೊಡಲಾಗುವುದೆ ? ಅಥವಾ ಸರ್ಕಾರ ರೈತರ ಜೀವನೋಪಾಯಕ್ಕಾಗಿ ಪರಿಹಾರವನ್ನು ನೀಡಬಯಸುವುದು ಎಂಬುದನ್ನು ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):- ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕು ಕರಡಿಗ ಗ್ರಾಮದ ಸರ್ವೆ ನಂ. 41 ಮತ್ತು 56 ರಲ್ಲಿ ಮಳೆಗಾಲದಲ್ಲಿ ನೀರು ನಿಲ್ಲುತ್ತಿದ್ದು ಫಸಲಿನ ನಾಶವನ್ನು ತಪ್ಪಿಸುವ ಸಲುವಾಗಿ ನಿಲ್ಲುತ್ತಿರುವ ನೀರು ಹರಿದು ಹೋಗಲು ಪೈಪ್‌ಗಳನ್ನು ಅಳವಡಿಸಲು ಜಿಲ್ಲಾ ಪಂಚಾಯತ್ ತಾಂತ್ರಿಕ ವಿಭಾಗ, ಶಿವಮೊಗ್ಗ ಇವರು ರೂ.

17,000-00ಗಳನ್ನು ಬಿಡುಗಡೆ ಮಾಡಿದ್ದಾರೆಂದು ತಿಳಿಸಿ ಜಿಲ್ಲಾ ಪರಿಷತ್ತಿನಿಂದ ಸ್ಪಷ್ಟ ಮಾಹಿತಿಯನ್ನು ತರಿಸಿ ಒದಗಿಸಲಾಗುವುದು. ಆದರೂ ಜಿಲ್ಲಾ ಪರಿಷತ್ತಿಗೆ ಕಾಮಗಾರಿಯನ್ನು ಈ ತಕ್ಷಣವೇ ತೆಗೆದುಕೊಳ್ಳಲು ಕೋರಲಾಗುವುದು.

ಕಳ್ಳಂಬೆಳ್ಳದ ಮರಡಿ ರಂಗನಾಥ ಪ್ರೌಢಶಾಲೆಯ ಸಹಶಿಕ್ಷಕರಿಗೆ ಸೌಲಭ್ಯ ನೀಡುವ ಬಗ್ಗೆ

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ):- ಸನ್ಮಾನ್ಯ ಅಧ್ಯಕ್ಷರೇ, ಶ್ರೀ ಎಸ್.ಅಪ್ಪಣ ಸಹಶಿಕ್ಷಕರು ಮರುಡಿ ರಂಗನಾಥ ಪ್ರೌಢಶಾಲೆ ಕಳ್ಳಂಬೆಳ್ಳ, ರಾ.ಹೆ.4, ಶಿರಾ ತಾಲ್ಲೂಕು ಇವರನ್ನು ಸಹಶಿಕ್ಷಕರಾಗಿ ಮುಂದುವರೆಸಿ ಎಲ್ಲಾ ಸೌಲಭ್ಯಗಳನ್ನು ಒದಗಿಸಿ, ಹುದ್ದೆಗೆ ಸಂಬಂಧಪಟ್ಟಂತೆ ಆನುಮೋದನೆಯನ್ನು ನೀಡುವಂತೆ ಕರ್ನಾಟಕ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಮೂರ್ತಿಯವರನ್ನೊಗೊಂಡ ವಿಭಾಗೀಯ ಪೀಠವು ದಿನಾಂಕ:23.1.96 ರಂದು ದಿ.ಪಿ.ನಂ.:1342:92ರಲ್ಲಿ ಆದೇಶವನ್ನು ನೀಡಿರುತ್ತದೆ ಮತ್ತು ದಿನಾಂಕ 1:2:1996ರಿಂದ ಆನುಮೋದನೆಯನ್ನು ನೀಡಿ ಎಲ್ಲಾ ಸೌಲಭ್ಯಗಳನ್ನು ಒದಗಿಸುವಂತೆ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ತುಮಕೂರು ರವರಿಗೆ ಮತ್ತು ಆಡಳಿತ ಮಂಡಲಿಯವರಿಗೆ ಆದೇಶವನ್ನು ನೀಡಿದ್ದರು ಸಹ ಇಲ್ಲಿಯತನಕ ಯಾವುದೇ ಸೌಲಭ್ಯಗಳನ್ನು ನೀಡದೆ, ಅದರ ಆನುಮೋದನೆಯನ್ನು ಸಹ ನೀಡದೆ ಉಪನಿರ್ದೇಶಕರು ದುರುದ್ದೇಶದಿಂದ ಕೂಡಿದ್ದು ನ್ಯಾಯಾಲಯ ಆಜ್ಞೆಯನ್ನು ಉಲ್ಲಂಘಿಸಿ ಮಾಡಿ ತೊಂದರೆಯನ್ನು ಮಾಡುತ್ತಿರುವುದರ ಬಗ್ಗೆ ಗಮನವನ್ನು ಸೆಳೆಯಲು ಇಚ್ಚಿಸುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು):- ಮಾನ್ಯ ಅಧ್ಯಕ್ಷರೆ, (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರ ಪರವಾಗಿ):-

ಶ್ರೀ ಅಪ್ಪಣ್ಣ, ಸಹ ಶಿಕ್ಷಕರು, ಮರಡಿ ರಂಗನಾಥ ಪ್ರೌಢಶಾಲೆ, ಕಳ್ಳಂಬೆಳ್ಳ, ಶಿರಾ ತಲ್ಲೂಕು ಇವರನ್ನು ಆಡಳಿತ ಮಂಡಳಿಯು ದಿನಾಂಕ 20-7-87 ರಲ್ಲಿ ನೇಮಕ ಮಾಡಿಕೊಂಡಿದ್ದು, ನೇಮಕಾತಿ ದಿನಾಂಕದಂದು ಅವರು ನಿಗಧಿತ ವಿದ್ಯಾರ್ಹತೆಯಾದ ಬಿ.ಇಡ್., ಹೊಂದಿರುವುದಿಲ್ಲ. ಆದ್ದುರಿಂದ ಅವರ ನೇಮಕಾತಿಯನ್ನು ಅನುಮೋದಿಸಿಲ್ಲ. ಇದರ ವಿರುದ್ಧ ಅವರು ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು, ನ್ಯಾಯಾಲಯವು ಇವರ ನೇಮಕಾತಿಯನ್ನು ದಿನಾಂಕ 1-2-96 ರಂದು ಅನುಮೋದಿಸುವಂತೆ ನಿರ್ದೇಶನ ನೀಡಿದೆ. ಈ ರೀತಿ 1-2-96 ರಿಂದ ಸದರಿ ಶಿಕ್ಷಕರನ್ನು ಅನುಮೋದಿಸಬೇಕಾದಲ್ಲಿ ಮೀಸಲಾತಿ ಉಲ್ಲಂಘಿನೆಯಾಗುವುದರಿಂದ ಅನುಮೋದಿಸಿಲ್ಲ. ಈ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮಲಪ್ರಭಾ ನದಿಗೆ ಕಟ್ಟಲಾಗಿರುವ ನವಿಲೂ ತೀರ್ಥ ಜಲಾಶಯಕ್ಕೆ 9 ಟಿ.ಎಂ.ಸಿ. ನೀರನ್ನು ಸದುಪಯೋಗ ಪಡಿಸಲು ಇರತಕ್ಕ ತೊಂದರೆಯ ಬಗ್ಗೆ

ಶ್ರೀ ಶ್ರೀಶೈಲಪ್ಪ ಬಿದನೂರು (ಕೋಣ):- ಮಾನ್ಯ ಅಧ್ಯಕ್ಷರೆ, ಮಹಾದಾಯಿ ನದಿಯನ್ನು ಮಲಪ್ರಭಾ ನದಿಗೆ ಜೋಡಿಸುವುದರಿಂದ ಮಲಪ್ರಭಾ ನದಿಗೆ ಕಟ್ಟಲಾಗಿರುವ ನವಿಲು ತೀರ್ಥ ಜಲಾಶಯಕ್ಕೆ ಕಡಿಮೆಯಾಗಿರುವು 9 ಟಿ.ಎಂಸಿ. ನೀರನ್ನು ಸದುಪಯೋಗ ಪಡಿಸಲು ಇರತಕ್ಕ ತೊಂದರೆ ಏನು ಈ ತೊಂದರೆಗಳನ್ನು ಪರಿಹರಿಸಲು ಕೈಗೊಳ್ಳುವ ಕ್ರಮಗಳೇನು ? ಈ ಯೋಜನೆಗಾಗಿ ಈ ವರ್ಷ ಖರ್ಚು ಮಾಡುವ ಹಣವೆಷ್ಟು ?